# ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು.

## ಎಸ್.ಸಿ ಸಂಖ್ಯೆ 261/2021

| | | |
|---|---|---|
| ಸಾಕ್ಷಿದಾರರ ಹೆಸರು | : ಕೃಷ್ಣಪ್ಪ ಎನ್.ಜಿ | **ಪಿಡಬ್ಲ್ಯೂ: 17** |
| ತಂದೆಯ ಹೆಸರು | : ಲೇಟ್ ಗಿರಿಯಪ್ಪ | **ಸಿಡಬ್ಲ್ಯೂ: 30** |
| ವಯಸ್ಸು | : 51 ವರ್ಷ | |
| ಉದ್ಯೋಗ | : ಡಿವೈಎಸ್ ಪಿ ರಾಜ್ಯಗುಪ್ತ ವಾರ್ತೆ ಹಾಸನ | |
| ವಾಸಸ್ಥಳ | : ಹಾಸನ | |

**ಸಾಕ್ಷಿಯನ್ನು ಈ ದಿನ ದಿಃ 23.03.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

1. ನಾನು ದಿ.14.06.2021 ರಿಂದ 30.11.2022 ರವರೆಗೆ ತಿ.ನರಸೀಪುರ ಪೊಲೀಸ್ ಠಾಣೆಯಲ್ಲಿ ಇನ್ಸಪೆಕ್ಟರ್ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿ.29.07.2021 ರಂದು ಈ ಕೇಸಿನ ಕಡತವನ್ನು ಚಾಸಾ–28 ರವರಿಂದ ಪಡೆದುಕೊಂಡು ಪರಿಶೀಲಿಸಿ ತನಿಖೆಯನ್ನು ಮುಂದುವರೆಸಿರುತ್ತೇನೆ.

3. ನಾನು ಆರೋಪಿಯ ಪತ್ತೆಯ ಬಗ್ಗೆ ಚಾಸಾ–24 ಮತ್ತು 25 ರವರನ್ನು ನೇಮಕ ಮಾಡಿರುತ್ತಾರೆ. ನಂತರ ಕೃತ್ಯ ನಡೆದ ಸ್ಥಳವಾದ ಬನಹಳ್ಳಿ ಗ್ರಾಮಕ್ಕೆ ಭೇಟಿ ನೀಡಿ ಪರಿಶೀಲಿಸಿರುತ್ತೇನೆ.

4. ನಂತರ ದಿ.30.07.2021 ರಂದು ಪ್ರಕರಣದ ಆರೋಪಿಯನ್ನು ಚಾಸಾ–24 ಮತ್ತು 25 ರವರು ತಿ.ನರಸೀಪುರ ಟೌನ್ ಖಾಸಗಿ ಬಸ್ ನಿಲ್ದಾಣದ ಬಳಿ ಬೆಳಿಗ್ಗೆ 6.15

ಗಂಟೆಗೆ ವಶಕ್ಕೆ ಪಡೆದುಕೊಂಡು ನನ್ನ ಮುಂದೆ 6.30 ಗಂಟೆಗೆ ವರದಿಯೊಂದಿಗೆ ಹಾಜರುಪಡಿಸಿರುತ್ತಾರೆ. ಸಾಕ್ಷಿಯೂ ವರದಿಯನ್ನು ನೋಡಿ ಗುರುತಿಸಿದ್ದು, ಸದರಿ ದಾಖಲೆಯನ್ನು ಈಗಾಗಲೇ ನಿಪಿ–30 ಎಂದು, ಸಾಕ್ಷಿಯ ಸಹಿಯನ್ನು ನಿಪಿ–30(ಬಿ) ಎಂದು ಗುರುತಿಸಲಾಯಿತು. ಆರೋಪಿಯನ್ನು ವಿಚಾರಣೆ ಮಾಡಿ ಆತನ ವಿರುದ್ಧ ದಸ್ತಗಿರಿ ಕ್ರಮ ಜರುಗಿಸಿ ಆತನ ಸ್ವಇಚ್ಛಾ ಹೇಳಿಕೆಯನ್ನು ದಾಖಲಿಸಿಕೊಂಡಿರುತ್ತೇನೆ. ಆತ ತನ್ನ ಹೇಳಿಕೆಯಲ್ಲಿ ಕೃತ್ಯ ಎಸಗಿರುವ ಬಗ್ಗೆ ಒಪ್ಪಿಕೊಂಡಿರುತ್ತಾನೆ.

5. ನಂತರ ತಿ.ನರಸೀಪುರ ಸರ್ಕಾರಿ ಆಸ್ಪತ್ರೆಯ ಶವಗಾರಕ್ಕೆ ಭೇಟಿ ನೀಡಿ ಪಂಚರಾದ ಚಾಸಾ–6 ರಿಂದ 8 ರವರೆಗೆ ನೋಟಿಸ್ ನೀಡಿ ಶವ ತನಿಖಾ ಕಾಲದಲ್ಲಿ ಹಾಜರಿರುವಂತೆ ಕೋರಿಕೊಂಡು ಬೆಳಿಗ್ಗೆ 7.30 ರಿಂದ 10.00 ಗಂಟೆವರೆಗೆ ಶವ ತನಿಖಾ ಮಹಜರ್ ಅನ್ನು ಮೃತ ಲಕ್ಷ್ಮಮ್ಮ ರವರ ಮೃತ ದೇಹದ ಮೇಲೆ ಜರುಗಿಸಿರುತ್ತೇನೆ. ಅದೇ ಸಮಯದಲ್ಲಿ ರಕ್ತ ಸಂಬಂಧಿಗಳಾದ ಚಾಸಾ–9 ಮತ್ತು 10 ರವರ ಹೇಳಿಕೆಗಳನ್ನು ದಾಖಲಿಸಿಕೊಂಡಿರುತ್ತೇನೆ. ಸಾಕ್ಷಿಯೂ ಶವ ತನಿಖಾ ಮಹಜರ್ ಅನ್ನು ನೋಡಿ ಗುರುತಿಸಿದ್ದು, ಸದರಿ ದಾಖಲೆಯನ್ನು ಈಗಾಗಲೇ ನಿಪಿ–10 ಎಂದು, ಸಾಕ್ಷಿಯ ಸಹಿಯನ್ನು ನಿಪಿ–10(ಡಿ) ಎಂದು ಗುರುತಿಸಲಾಯಿತು. ಅದೇ ಸಮಯದಲ್ಲಿ ಫೋಟೋಗಳನ್ನು ತೆಗೆಯಲಾಗಿರುತ್ತದೆ. ಸಾಕ್ಷಿಯೂ ಫೋಟೋಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ನಿಪಿ–11 ರಿಂದ 13 ಎಂದು ಗುರುತಿಸಲಾಗಿರುತ್ತದೆ.

6. ನಂತರ ಫಾರ್ಮ್ ನಂ.146 (1) (2) ಭರ್ತಿ ಮಾಡಿ ಮೃತ ದೇಹದ ಮೇಲೆ ಮರಣೋತ್ತರ ಪರೀಕ್ಷೆಯನ್ನು ನಡೆಸುವಂತೆ ತಿ.ನರಸೀಪುರ ಸರ್ಕಾರಿ ಆಸ್ಪತ್ರೆಯ ವೈದ್ಯಾಧಿಕಾರಿಯವರಿಗೆ ಕೋರಿಕೆ ಪತ್ರವನ್ನು ಸಲ್ಲಿಸಿರುತ್ತೇನೆ. ನಂತರ ಚಾಸಾ–22 ರವರನ್ನು

ಶವದ ಬೆಂಗಾವಲಿಗೆ ನೇಮಿಸಿರುತ್ತೇನೆ. ಮೃತ ದೇಹದ ಮೇಲೆ ಮರಣೋತ್ತರ ಪರೀಕ್ಷೆಯನ್ನು ವೈದ್ಯಾಧಿಕಾರಿಯವರು ಪೂರ್ಣಗೊಳಿಸಿದ ಮೇಲೆ ಮೃತ ದೇಹವನ್ನು ರಕ್ತಸಂಬಂಧಿಯಾದ ಚಾಸಾ–1 ರವರಿಗೆ ಹಸ್ತಾಂತರಿಸಿ ಸ್ವೀಕೃತಿಯನ್ನು ಪಡೆದುಕೊಂಡಿರುತ್ತೇನೆ.

7. ನಂತರ ಠಾಣೆಗೆ ವಾಪಸ್ ಬಂದು ಆರೋಪಿ ಕೃತ್ಯ ನಡೆದ ಸಮಯದಲ್ಲಿ ಬಟ್ಟೆಗಳು ಇವೆ ಎಂದು ತೋರಿಸಿ ಆರೋಪಿ ಧರಿಸಿದ್ದ ಕ್ರೀಮ ಬಣ್ಣದ ಕಪ್ಪು ಚುಕ್ಕೆಗಳ್ಳುಳ ತುಂಬು ತೋಳಿನ ಶರ್ಟ ಮತ್ತು ಕಪ್ಪು ಪ್ಯಾಂಟನ್ನು ಆರೋಪಿಗೆ ಬೇರೆ ಬಟ್ಟೆಯನ್ನುಧರಿಸಲು ವ್ಯವಸ್ಥೆ ಮಾಡಿ ಸದರಿ ಆತ ಧರಿಸಿದ ಮೇಲೆ ಹೇಳಿದ ಬಟ್ಟೆಗಳನ್ನು ಪಂಚರಾದ ಚಾಸಾ–15 ಮತ್ತು 15 ರವರ ಸಮಕ್ಷಮ ಬೆಳಿಗ್ಗೆ 10.15 ರಿಂದ 11.00 ಗಂಟೆವರೆಗೆ ಮಹಜರ್ ಜರುಗಿಸಿ ಬಟ್ಟೆಗಳನ್ನು ಅಮಾನತ್ತುಪಡಿಸಿಕೊಂಡಿರುತ್ತೇನೆ. ಸಾಕ್ಷಿಯೂ ಮಹಜರ್ ನೋಡಿ ಗುರುತಿಸಿದ್ದು , ಸದರಿ ದಾಖಲೆಯನ್ನು ಈಗಾಗಲೇ ನಿಪಿ–16 ಎಂದು , ಸಾಕ್ಷಿಯ ಸಹಿಯನ್ನು ನಿಪಿ–16(ಪಿ) ಎಂದು ಗುರುತಿಸಲಾಯಿತು. ಸದರಿ ಸಮಯದಲ್ಲಿ ಪೋಟೋಗಳನ್ನು ಸಹ ತೆಗೆಯಲಾಗಿರುತ್ತದೆ. ಸಾಕ್ಷಿಯು ಪೋಟೋಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ನಿಪಿ–17 ರಿಂದ ನಿಪಿ–21 ಎಂದು ಗುರುತಿಸಲಾಗಿರುತ್ತದೆ. ಸಾಕ್ಷಿಯು ಬಟ್ಟೆಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ಮುದ್ದೆ ಮಾಲು–6 ಮತ್ತು 7 ಎಂದು ಗುರುತಿಸಲಾಗಿರುತ್ತದೆ. ಸದರಿ ಅಮಾನತ್ತುಪಡಿಸಿಕೊಂಡ ಬಟ್ಟೆಗಳನ್ನು ಠಾಣಾ ಮಾಲು ಪಟ್ಟಿ ಸಂ.214/2021 ರಲ್ಲಿ ಅಳವಡಿಸಿ ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ.

(ನ್ಯಾಯಾಲಯದ ಅವಧಿ ಮುಗಿದಿದ್ದರಿಂದ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು.)

**ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.**

8. ತಿ.ನರಸೀಪುರ ತಾಲ್ಲೂಕಿನ ತಹಶೀಲ್ದಾರವರಿಗೆ ಮಹಜರ್ ಜರುಗಿಸಲು ಸಾಕ್ಷಿದಾರರನ್ನು ಕಳುಹಿಸಿ ಕೊಡುವಂತೆ ಕೋರಿಕೆ ಪತ್ರವನ್ನು ಸಲ್ಲಿಸಿರುತ್ತೇನೆ. ನಂತರ ತಹಶೀಲ್ದಾರವರು ಇಬ್ಬರು ಪಂಚರನ್ನು ಮಹಜರ್ ಗೆ ನೇಮಿಸಿರುವ ಬಗ್ಗೆ ಅಧಿಕೃತ ಜ್ಞಾಪನವನ್ನು ನೀಡಿದ್ದು ಅದನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಚಾಸಾ–4 ಮತ್ತು ಚಾಸಾ–5 ರವರನ್ನು ಮಹಜರ್ ಗೆ ನೇಮಕ ಮಾಡಲಾಗಿರುತ್ತದೆ. ನಂತರ ನಾನು ಕೃತ್ಯ ನಡೆದ ಸ್ಥಳಕ್ಕೆ ಭೇಟಿ ನೀಡಿ ಚಾಸಾ–4 ಮತ್ತು 5 ರವರನ್ನು ಬರಮಾಡಿಕೊಂಡು ಅವರಿಗೆ ಪ್ರಕರಣದ ವಿದ್ಯಮಾನವನ್ನು ತಿಳಿಸಿ ಕೃತ್ಯ ನಡೆದ ಸ್ಥಳದ ಮಹಜರ್ ಕಾಲದಲ್ಲಿ ಹಾಜರಿರುವಂತೆ ತಿಳಿಸಿ ಅದರಂತೆ ಪಂಚರು ಹಾಜರಿದ್ದು, ಪ್ರಕರಣದ ಪಿರ್ಯಾಧಿ ಚಾಸಾ–1 ರವರು ಸ್ಥಳದಲ್ಲಿ ಹಾಜರಿದ್ದು ಕೃತ್ಯ ಸ್ಥಳವನ್ನು ತೋರಿಸಿದ ಮೇರೆಗೆ ಪಂಚರ ಸಮಕ್ಷಮ ಕೃತ್ಯ ನಡೆದ ಸ್ಥಳವಾದ ಬನಹಳ್ಳಿ ಯ ಚಾಸಾ–1 ರವರ ಮನೆಯ ಮುಂಭಾಗ ಸ್ಥಳ ಮಹಜರ್ ನ್ನು ಪಂಚರ ಜರುಗಿಸಿರುತ್ತೇನೆ. ಮಹಜರ್ ಕಾಲದಲ್ಲಿ ಕೃತ್ಯ ನಡೆದ ಸ್ಥಳದಲ್ಲಿ ಬಿದ್ದಿದ್ದ ಡೈಸನ್ ಇರುವ ಹಸಿರು ಬಣ್ಣದ ಬಳೆಯ ಚೂರುಗಳನ್ನು ಮತ್ತು ಕೃತ್ಯ ಸ್ಥಳದ ಪಕ್ಕದಲ್ಲಿ ಬಿದ್ದಿದ್ದ ಕೃತ್ಯಕ್ಕೆ ಉಪಯೋಗಿಸಿದ ಒಂದು ದೊಣ್ಣೆಯನ್ನು ಮುಂದಿನ ತನಿಖೆಗಾಗಿ ಮಹಜರ್ ಮೂಲಕ ಅಮಾನತ್ತುಪಡಿಸಿಕೊಂಡು ಪ್ರತ್ಯೇಕವಾಗಿ ಬಿಳಿ ಬಟ್ಟೆಯಲ್ಲಿ ಹಾಕಿ ಪಿ ಎಂಬ ಅಕ್ಷರದಿಂದ ಸೀಲ್ ಮಾಡಿ ಅಮಾನತ್ತುಪಡಿಸಿಕೊಂಡಿರುತ್ತೇನೆ. ಸದರಿ ಮಹಜರ್ ಅನ್ನು ಮಧ್ಯಾಹ್ನ 12.15 ರಿಂದ 1.20 ರವರೆಗೆ ಜರುಗಿಸಿರುತ್ತೇನೆ. ಸಾಕ್ಷಿಯೂ

ಮಹಜರ್ ಅನ್ನು ನೋಡಿ ಗುರುತಿಸಿದ್ದು, ಸದರಿ ದಾಖಲೆಯನ್ನು ಈಗಾಗಲೇ ನಿಪಿ.2 ಎಂದು , ಸಾಕ್ಷಿಯ ಸಹಿಯನ್ನು ನಿಪಿ.2(ಡಿ) ಎಂದು ಗುರುತಿಸಲಾಯಿತು. ಸಾಕ್ಷಿಯು ಮುದ್ದೆಮಾಲು–1 ಮತ್ತು 2 ನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಮಹಜರ್ ಕಾಲದಲ್ಲಿ ಫೋಟೋಗಳನ್ನು ಸಹ ತೆಗೆದಿರುತ್ತೇನೆ. ಸಾಕ್ಷಿಯು ಫೋಟೋಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ನಿಪಿ–3 ರಿಂದ ನಿಪಿ–6 ಎಂದು ಗುರುತಿಸಲಾಗಿರುತ್ತದೆ. ನಂತರ ಅಮಾನತ್ತುಪಡಿಸಿಕೊಂಡ ಬಳೆ ಮತ್ತು ದೊಣ್ಣೆಯನ್ನು ಠಾಣಾ ಮಾಲು ಪಟ್ಟಿ ಸಂ.215/2021 ರಲ್ಲಿ ಅಳವಡಿಸಿ ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಅದೇ ದಿನ ಈ ಪ್ರಕರಣದ ಪ್ರತ್ಯಕ್ಷ ಸಾಕ್ಷಿದಾರರಾದ ಚಾಸಾ–2, ಚಾಸಾ–3 ರವರನ್ನು ವಿಚಾರಣೆ ಮಾಡಿ ಅವರ ಹೇಳಿಕೆಗಳನ್ನು ದಾಖಲಿಸಿಕೊಂಡಿರುತ್ತೇನೆ. ನಂತರ ಆರೋಪಿಯ ವೈದ್ಯಕೀಯ ಚಿಕಿತ್ಸೆ ಮಾಡಿಸಿ ವರದಿ ಪಡೆದುಕೊಂಡು ರಿಮ್ಯಾಂಡ್ ಅರ್ಜಿಯ ಜೊತೆಗೆ ಮಾನ್ಯ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಅದೇ ದಿನ ಚಾಸಾ–21 ಮತ್ತು 22 ರವರ ಹೇಳಿಕೆಗಳನ್ನು ದಾಖಲಿಸಿಕೊಂಡಿರುತ್ತೇನೆ. ಪ್ರಕರಣದ ಸಾಂದರ್ಭಿಕ ಸಾಕ್ಷಿದಾರರಾದ ಚಾಸಾ–11 ಮತ್ತು 12 ರವರನ್ನು ವಿಚಾರಣೆ ಮಾಡಿ ಅವರ ಹೇಳಿಕೆಗಳನ್ನು ದಾಖಲಿಸಿಕೊಂಡಿರುತ್ತೇನೆ.

9. ದಿ.31.07.2021 ರಂದು ಪ್ರಕರಣದ ಸಾಂದರ್ಭಿಕ ಸಾಕ್ಷಿದಾರರಾದ ಚಾಸಾ–13 ಮತ್ತು ಚಾಸಾ–14 ವಿಚಾರಣೆ ಮಾಡಿ ಅವರ ಹೇಳಿಕೆಗಳನ್ನು ದಾಖಲಿಸಿಕೊಂಡಿರುತ್ತೇನೆ. ಚಾಸಾ–13 ರವರು ನಿಪಿ–15 ರಂತೆ ಮತ್ತು ಚಾಸಾ–14 ರವರು ನಿಪಿ–14 ರಂತೆ ನನ್ನ ಮುಂದೆ ಹೇಳಿಕೆಯನ್ನು ನೀಡಿರುತ್ತಾರೆ.

10. ದಿ.03.08.2021 ರಂದು ಪ್ರಕರಣದ ಪ್ರತ್ಯಕ್ಷ ಸಾಕ್ಷಿದಾರರಾದ ಚಾಸಾ–2 ಮತ್ತು 3 ರವರ ಕಲಂ 164 ಸಿ.ಆರ್.ಪಿ.ಸಿ ರಡಿಯ ಹೇಳಿಕೆಯನ್ನು ದಾಖಲಿಸುವಂತೆ ತಿ.ನರಸೀಪುರ ಸಿಜೆ ಮತ್ತು ಜೆಎಂಎಫ್ ಸಿ ನ್ಯಾಯಾಧೀಶರಿಗೆ ಮನವಿಯನ್ನು ಸಲ್ಲಿಸಿರುತ್ತೇನೆ, ಅದೇ ದಿನ ಸಾಕ್ಷಿದಾರರನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿದ್ದು ಸಾಕ್ಷಿದಾರರ ಕಲಂ. 164 ಸಿ.ಆರ್.ಪಿ.ಸಿ ರಡಿಯ ಹೇಳಿಕೆಯನ್ನು ನ್ಯಾಯಾಧೀಶರು ದಾಖಲು ಮಾಡಿರುತ್ತಾರೆ. ಅದೇ ದಿನ ಸದರಿಯವರ ಹೇಳಿಕೆಯನ್ನು ನ್ಯಾಯಾಲಯದಿಂದ ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಸಾಕ್ಷಿಯು ನಿಪಿ–9 ಮತ್ತು 8 ರಲ್ಲಿರುವ ಹೇಳಿಕೆಗಳನ್ನು ನೋಡಿ ಗುರುತಿಸಿರುತ್ತಾರೆ.

11. ದಿ.07.08.2021 ರಂದು ಮಹಜರ್ ಗಳ ಕಾಲದಲ್ಲಿ ತೆಗೆದ ಫೋಟೋಗಳು ಮತ್ತು ಅವುಗಳಿಗೆ ಸಂಬಂಧಪಟ್ಟ ಸಿ.ಡಿ ಗಳನ್ನು ತಿ.ನರಸೀಪುರ ಸಂಜು ಸ್ಟುಡಿಯೋ ದ ಫೋಟೋ ಗ್ರಾಫರ್ ನಿಂದ ಪಡೆದುಕೊಂಡು ಜೊತೆಗೆ ಕಲಂ 65 ಬಿ ಸಾಕ್ಷ್ಯ ಅಧಿನಿಯಮದ ರಡಿಯ ಪ್ರಮಾಣಪತ್ರವನ್ನು ಚಾಸಾ–17 ರವರಿಂದ ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಸಾಕ್ಷಿಯೂ ಪ್ರಮಾಣಪತ್ರವನ್ನು ನೋಡಿ ಗುರುತಿಸಿದ್ದು , ಅದನ್ನು ಈಗಾಗಲೇ ನಿಪಿ–23 ಎಂದು, ಸಾಕ್ಷಿಯ ಸಹಿಯನ್ನು ನಿಪಿ–23(ಬಿ) ಎಂದು ಗುರುತಿಸಲಾಯಿತು. ಸಾಕ್ಷಿ ಸಿ.ಡಿಯನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ–22 ಎಂದು ಗುರುತಿಸಲಾಗಿರುತ್ತದೆ. ಫೋಟೋ ಮತ್ತು ಸಿ.ಡಿ ಗೆ ಹಣ ಸಂದಾಯ ಮಾಡಿದ್ದು ಹಣ ಸಂದಾಯ ರಸೀದಿಯನ್ನು ಸಹ ಪಡೆದುಕೊಂಡಿರುತ್ತೇನೆ. ಸಾಕ್ಷಿ ಹಣ ಸಂದಾಯ ರಸೀದಿಯನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ–24 ಎಂದು ಗುರುತಿಸಲಾಗಿರುತ್ತದೆ. ಸಾಕ್ಷಿ ಸಹಿಯನ್ನು ನಿಪಿ–24(ಬಿ) ಎಂದು ಗುರುತಿಸಲಾಯಿತು.

12. ದಿ.12.08.2021 ರಂದು ಮೃತ ಲಕ್ಷ್ಮಮ್ಮರವರ ಮೃತ ದೇಹದ ಮೇಲೆ ನಡೆಸಿದ ಮರಣೋತ್ತರ ಪರೀಕ್ಷೆ ವರದಿಯನ್ನು ಮತ್ತು ಮರಣೋತ್ತರ ಪರೀಕ್ಷೆ ಕಾಲದಲ್ಲಿ ಸಂಗ್ರಹಿಸಿದ ಒಂದು ಹಳದಿ ಬಣ್ಣದ ಸೀರೆ, ನೇರಳೆ ಬಣ್ಣದ ಒಂದು ರವಿಕೆ ಮತ್ತು ನೀಲಿ ಬಣ್ಣದ ಒಳಲಂಗವನ್ನು ಹಾಜರುಪಡಿಸಿದ್ದು ಅವುಗಳನ್ನು ಪಡೆದುಕೊಂಡು ಠಾಣಾ ಮಾಲು ಪಟ್ಟಿ ಸಂ.231/2021 ರಲ್ಲಿ ಅಳವಡಿಸಿ ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಮರಣೋತ್ತರ ಪರೀಕ್ಷೆಯನ್ನು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಸಾಕ್ಷಿಯು ಮರಣೋತ್ತರ ಪರೀಕ್ಷೆಯನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ–25 ಎಂದು ಗುರುತಿಸಲಾಗಿದ್ದು, ಸಾಕ್ಷಿ ಸಹಿಯನ್ನು ನಿಪಿ–25(ಬಿ) ಎಂದು ಗುರುತಿಸಲಾಯಿತು. ಸಾಕ್ಷಿ ಮುದ್ದೆ ಮಾಲು–3 ರಿಂದ 5 ನ್ನು ನೋಡಿ ಗುರುತಿಸಿರುತ್ತಾರೆ. ಅದೇ ದಿನ ಪ್ರಕರಣದಲ್ಲಿ ಪಿ.ಎಫ್–231/2021, 214/2021, 215/2021 ರಲ್ಲಿ ಅಳವಡಿಸಿದ ವಸ್ತುಗಳನ್ನು ರಾಸಾಯನಿಕ ಪರೀಕ್ಷೆಗೆ ಎಫ್ ಎಸ್ ಎಲ್ ಗೆ ಚಾಸಾ–26 ರವರ ಮುಖಾಂತರ ಕಳುಹಿಸಿ ಕೊಟ್ಟಿರುತ್ತೇನೆ. ಅದೇ ದಿನ ಆರೋಪಿ ಕೃತ್ಯಕ್ಕೆ ಬಳಸಿದ ದೊಣ್ಣೆಯನ್ನು ಮರಣೋತ್ತರ ಪರೀಕ್ಷೆ ನಡೆಸಿದ ವೈದ್ಯರ ಮುಂದೆ ಹಾಜರುಪಡಿಸಿ ಆಯುಧಕ್ಕೆ ಸಂಬಂಧಪಟ್ಟಂತೆ ಅಭಿಪ್ರಾಯವನ್ನು ನೀಡುವಂತೆ ಕೇಳಿಕೊಂಡಿರುತ್ತೇನೆ. ಸದರಿ ಕೋರಿಕೆ ಪತ್ರದಲ್ಲಿ ಮೃತ ಲಕ್ಷ್ಮಮ್ಮರವರ ದೇಹದ ಮೇಲೆ ಆದ ಗಾಯಗಳು ದೊಣ್ಣೆಯಿಂದ ಹೊಡೆದಾಗ ಉಂಟಾಗುವ ಗಾಯಗಳೇ ಎಂಬುವ ಬಗ್ಗೆ ಮತ್ತು ಲಕ್ಷ್ಮಮ್ಮರವರ ತಲೆಯ ಹಿಂಭಾಗ ಎಡಭಾಗದಲ್ಲಿ ಉಂಟಾಗಿದ್ದ ಉದಿಕೊಂಡ ಮಾದರಿಯ ಗಾಯ ಘಟನೆಯ ಬಳಿಕ ಲಕ್ಷ್ಮಮ್ಮ ರಸ್ತೆಯ ಮೇಲೆ ಬಿದ್ದಾಗ ಉಂಟಾಗಿರುವ ಗಾಯಗಳೇ ಮತ್ತು ಲಕ್ಷ್ಮಮ್ಮರವರ ಮರಣಕ್ಕೆ ಸಂಬಂಧಪಟ್ಟಂತೆ ಅಭಿಪ್ರಾಯ ನೀಡುವಂತೆ ಕೋರಿಕೊಂಡಿರುತ್ತೇನೆ. ಕೋರಿಕೆ

ಮೇರೆಗೆ ತಿ.ನರಸೀಪುರ ಸರ್ಕಾರಿ ಆಸ್ಪತ್ರೆ ವೈದ್ಯಾಧಿಕಾರಿಗಳು ಮೃತ ಲಕ್ಷ್ಮಮ್ಮರವರ ದೇಹದ ಮೇಲೆ ಆದ ಗಾಯಗಳು ದೊಣ್ಣೆಯಿಂದ ಹೊಡೆದಾಗ ಆಗುವ ಸಾಧ್ಯತೆ ಇರುತ್ತದೆ ಮತ್ತು ಗಾಯಗಳು ಮರಣ ಪೂರ್ವ ಗಾಯಗಳಾಗಿರುತ್ತವೆ ಮತ್ತು ಮೃತ ಲಕ್ಷ್ಮಮ್ಮ ಹಿಮ್ಮುಖವಾಗಿ ಬಿದ್ದಾಗ ತಲೆಯ ಹಿಂಭಾಗದ ಎಡಭಾಗದಲ್ಲಿ ಉದಿಕೊಂಡ ಮಾದರಿಯ ಗಾಯ ಉಂಟಾಗಬಹುದು ಎಂದು ವರದಿಯನ್ನು ನೀಡಿರುತ್ತಾರೆ. ಸಾಕ್ಷಿಯು ಕೋರಿಕೆ ಪತ್ರವನ್ನು ನೋಡಿ ಗುರುತಿಸಿದ್ದು ಸದರಿ ಕೋರಿಕೆ ಪತ್ರವನ್ನು ನಿಪಿ–26 ಎಂದು ಈಗಾಗಲೇ ಗುರುತಿಸಲಾಗಿದ್ದು ಸಾಕ್ಷಿ ಸಹಿಯನ್ನು ನಿಪಿ–26(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಯು ವೈದ್ಯರ ಅಭಿಪ್ರಾಯನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ–27 ಎಂದು ಗುರುತಿಸಲಾಗಿದ್ದು, ಸಾಕ್ಷಿ ಸಹಿಯನ್ನು ನಿಪಿ–27(ಬಿ) ಎಂದು ಗುರುತಿಸಲಾಗಿರುತ್ತದೆ.

13. ದಿ.13.08.2021 ರಂದು ಚಾಸಾ–26 ರವರು ಅಮಾನತ್ತುಪಡಿಸಿಕೊಂಡ ವಸ್ತುಗಳನ್ನು ಆರ್ ಎಫ್ ಎಸ್ ಎಲ್ ಗೆ ನೀಡಿ ಸ್ವೀಕೃತಿಯನ್ನು ತಂದು ಹಾಜರುಪಡಿಸಿದ್ದು ಅದನ್ನು ಸ್ವೀಕರಿಸಿ ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ.

14. ದಿ.19.08.2021 ರಂದು ಈ ಪ್ರಕರಣದ ಕೃತ್ಯ ನಡೆದ ಸ್ಥಳದ ನಕಾಶೆಯನ್ನು ತಯಾರಿಸಿ ಕೊಡುವಂತೆ ತಿ.ನರಸೀಪುರ ಲೋಕೋಪಯೋಗಿ ಇಲಾಖೆಯ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ರವರಿಗೆ ಕೋರಿಕೆ ಪತ್ರವನ್ನು ಸಲ್ಲಿಸಿರುತ್ತೇನೆ. ಸಾಕ್ಷಿಯು ಸದರಿ ಪತ್ರವನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ.31 ಎಂದು ಗುರುತಿಸಲಾಯಿತು.

15. ದಿ.06.09.2021 ರಂದು ತಿ.ನರಸೀಪುರ ಲೋಕೋಪಯೋಗಿ ಇಲಾಖೆಯ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ರವರಿಂದ ಕೃತ್ಯ ನಡೆದ ಸ್ಥಳದ ನಕಾಶೆಯನ್ನು

ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಸಾಕ್ಷಿಯು ಸದರಿ ನಕಾಶೆಯನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ.28 ಎಂದು, ಸಾಕ್ಷಿ ಸಹಿಯನ್ನು ನಿಪಿ-28(ಎ) ಎಂದು ಗುರುತಿಸಲಾಯಿತು.

16. ದಿ.17.09.2021 ರಂದು ಅಮಾನತ್ತುಪಡಿಸಿಕೊಂಡ ವಸ್ತುಗಳಿಗೆ ಸಂಬಂಧಪಟ್ಟ ಆರ್ ಎಫ್ ಎಸ್ ಎಲ್ ವರದಿಯನ್ನು ಸ್ವೀಕರಿಸಿದ್ದು ಅದನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಸಾಕ್ಷಿಯು ಸದರಿ ವರದಿಯನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ.29 ಎಂದು, ಸಾಕ್ಷಿ ಸಹಿಯನ್ನು ನಿಪಿ-29(ಎ) ಎಂದು ಗುರುತಿಸಲಾಯಿತು. ಅದೇ ದಿನ ಮೃತ ಲಕ್ಷ್ಮಮ್ಮ ಸಾವಿಗೆ ಸಂಬಂಧಪಟ್ಟಂತೆ ಅಂತಿಮ ಅಭಿಪ್ರಾಯವನ್ನು ನೀಡುವಂತೆ ಮರಣೋತ್ತರ ಪರೀಕ್ಷೆ ನಡೆಸಿದ ವೈದ್ಯರಿಗೆ ಕೋರಿಕೊಂಡಿದ್ದು ಅಭಿಪ್ರಾಯವನ್ನು ಮರಣೋತ್ತರ ಪರೀಕ್ಷೆಯಲ್ಲಿ ಪಡೆಯಲಾಗಿರುತ್ತದೆ. ಸಾಕ್ಷಿ ನಿಪಿ-25 ರಲ್ಲಿಯ ಅಂತಿಮ ಅಭಿಪ್ರಾಯವನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-25(ಸಿ) ಎಂದು ಗುರುತಿಸಲಾಯಿತು.

17. ದಿ.27.09.2021 ರಂದು ಪ್ರಕರಣಲ್ಲಿ ತನಿಖೆಯನ್ನು ಪೂರ್ಣಗೊಳಿಸಿ ಸಂಗ್ರಹಿಸಿದ ಸಾಕ್ಷ್ಯಧಾರಗಳ ಆಧಾರದ ಮೇಲೆ ಆರೋಪಿ ಕೃತ್ಯ ಎಸಗಿರುವುದು ಸಾಬೀತಾದ್ದರಿಂದ ಆತನ ವಿರುದ್ಧ ಮಾನ್ಯ ನ್ಯಾಯಾಲಯಕ್ಕೆ ದೋಷಾರೋಪಣೆ ಪಟ್ಟಿಯನ್ನು ಸಲ್ಲಿಸಿರುತ್ತೇನೆ. ಆರೋಪಿಯನ್ನು ನೋಡಿದರೆ ಗುರುತಿಸಬಲ್ಲೆ. ಆರೋಪಿ ಗೈರು ಹಾಜರಿದ್ದು ಆತನ ಗೈರು ಹಾಜರಿಯಲ್ಲಿ ಗುರುತಿಸಲು ತಕರಾರು ಇರುವುದಿಲ್ಲ ಎಂದು ಆರೋಪಿ ಪರ ವಕೀಲರು ತಿಳಿಸಿರುತ್ತಾರೆ.

ಪಾಟೀ ಸವಾಲುಃ ಆರೋಪಿ ಪರ ವಕೀಲರು ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಿ ಮುಂದೂಡಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಿಸಲಾಯಿತು.)**

**ಓ ಹೇ ಕೇ ಸ ಇ ಎ ಒ**

**3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು,**
**ಮೈಸೂರು.**